:: **ಪತ್ರಿಕಾ ಪ್ರಕಟಣೆ** ::

**ಎಂ.ಬಿ ನಗರ ಪೊಲೀಸ ಠಾಣೆಯ ಪೊಲೀಸರ ಕಾರ್ಯಾಚರಣೆ**

**4 ಜನ ಮೋಟಾರ ಸೈಕಲ ಕಳ್ಳರ ಬಂಧನ ಒಬ್ಬ ಪರಾರಿ. 4.40 ಲಕ್ಷ ರೂಪಾಯಿ ಬೆಲೆ ಬಾಳುವ ಮೋಟಾರ ಸೈಕಲಗಳು ಜಪ್ತಿ.**

ಮಾನ್ಯ ವೈ . ಎಸ್. ರವಿಕುಮಾರ ಐ.ಪಿ.ಎಸ್ ಪೊಲೀಸ್ ಆಯುಕ್ತರು ಕಲಬುರಗಿ ನಗರ, ಶ್ರೀ ಡಿ.ಕಿಶೋರಬಾಬು. ಐ.ಪಿ.ಎಸ್. (ಕಾ&ಸು) ಉಪ ಪೊಲೀಸ್ ಆಯುಕ್ತರು ಕಲಬುರಗಿ ನಗರ , ಶ್ರೀ ಶ್ರೀಕಾಂತ ಕಟ್ಟಿಮನಿ ಕೆ.ಎಸ್.ಪಿ.ಎಸ್. ಉಪ ಪೊಲೀಸ್ ಆಯುಕ್ತರು ಅಪರಾಧ & ಸಂಚಾರ ವಿಭಾಗ ಕಲಬುರಗಿ ನಗರ, ರವರ ಮಾರ್ಗದರ್ಶನದಲ್ಲಿ ಹಾಗೂ ಶ್ರೀ ಗಿರೀಶ. ಬಿ ಸಹಾಯಕ ಪೊಲೀಸ್ ಆಯುಕ್ತರು "ಬಿ" ಉಪವಿಭಾಗ ಕಲಬುರಗಿ ನಗರ ರವರ ನೇತೃತ್ವದಲ್ಲಿ ಅಧಿಕಾರಿಯವರಾದ ಚಂದ್ರಶೇಖರ ತಿಗಡಿ ಪಿ.ಐ ಎಂ.ಬಿ ನಗರ ಹಾಗೂ ಸಿಬ್ಬಂದಿ ಯವರಾದ ಪಾಂಡುರಂಗ ಎ.ಎಸ್.ಐ, ಬಂದೇನವಾಜ ಹೆಚ್ ಸಿ 198, ಹಣಮಂತ ತೋಟದ ಹೆಚ್ ಸಿ 218, ಅಶೋಕ ಕಟಕೆ ಸಿಪಿಸಿ 966 ಹಾಗೂ ಸಿದ್ದಣ್ಣ ಸಿಪಿಸಿ 781 ಇಂದು ದಿನಾಂಕ 08/06/2021 ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ಬಾರ ಹಿಲ್ಸ ಹತ್ತೀರ ಕೊವಿಡ್-19 & ಲಾಕಡೌನ ಪ್ರಯುಕ್ತ ಅನಾವಶ್ಯಕವಾಗಿ ಓಡಾಡುತ್ತಿರುವ ವಾಹನಗಳನ್ನು ಚೆಕಿಂಗ ಮಾಡುತ್ತಿರುವಾಗ ನಾಲ್ಕು ಜನರು ಎರಡು ಮೋಟಾರ ಸೈಕಲ ಮೇಲೆ ಬರುತ್ತಿರುವಾಗ ಅವರು ನಮ್ಮನ್ನು ನೋಡಿ ಅನುಮಾನಸ್ಪದವಾಗಿ ಓಡಿ ಹೋಗುತ್ತಿರುವಾಗ ಅವರನ್ನು ಬೆನ್ನತ್ತಿ ಹೋಗಿ ಹಿಡಿದುಕೊಂಡು ಅವರ ಹೆಸರು & ವಿಳಾಸ ಹೇಳಲು ತಡವರಿಸಿದಾಗ ಮತ್ತು ಅವರ ಹತ್ತೀರವಿರುವ ಮೋಟಾರ ಸೈಕಲನ ನೋಂದಣಿ ಪುಸ್ತಕ ಕೇಳಿದಾಗ ಅವರ ಹತ್ತೀರ ಯಾವುದೆ ದಾಖಲಾತಿಗಳು ಇರದ ಕಾರಣ ನಮಗೆ ಸಂಶಯ ಬಂದು ಅವರನ್ನು ನಮ್ಮ ವಶಕ್ಕೆ ತೆಗೆದುಕೊಂಡು ಠಾಣೆಗೆ ತಂದು ವಿಚಾರಣೆ ಮಾಡಿದಾಗ 1) ಮಹ್ಮದ ಮುಕ್ರಮ, 2) ಮಹ್ಮದ ತಬ್ರೇಜ್, 3) ಖಾಜಾಖಾನ, 4) ಸೈಯದ ಸಲೀಮ ಸಾ॥ ಎಲ್ಲರೂ ಕಲಬುರಗಿ ಅಂತಾ ತಿಳಿಸಿದ್ದು ಸದರಿಯವರು ಕಲಬುರಗಿ ನಗರದ ವಿವಿದ ಬಡಾವಣೆಗಳಲ್ಲಿ ನಿಲ್ಲಿಸಿರುವ ಮೋಟಾರ ಸೈಕಲಗಳನ್ನು ಹಗಲು ಮತ್ತು ರಾತ್ರಿ ಸಮಯದಲ್ಲಿ ಯಾರು ಇರದೇ ಇರುವಾಗ ಕಳ್ಳತನಮಾಡಿ ಮಾರಟ ಮಾಡುತ್ತಿರುವದಾಗಿ ಕಳ್ಳತನ ಮಾಡಿದ ಬಗ್ಗೆ ಒಪ್ಪಿಕೊಂಡಿದ್ದು ಇರುತ್ತದೆ. ಸದರಿಯವರನ್ನು ಇಂದು ದಿನಾಂಕ 08/06/2021 ರಂದು ದಸ್ತಗಿರಿ ಮಾಡಿ ಆರೋಪಿತರ ಕಡೆಯಿಂದ 11 ಮೋಟಾರ ಸೈಕಲಗಳನ್ನು ಜಪ್ತಿ ಮಾಡಿಕೊಂಡಿದ್ದು ಇರುತ್ತದೆ. ಅಂ.ಕಿ. 4.40 ಲಕ್ಷ ರೂ ಬೆಲೆ ಬಾಳುವ ವಾಹನಗಳನ್ನು ಜಪ್ತಿ ಪಡಿಸಿಕೊಳ್ಳಲಾಗಿದೆ. ಮೋಟಾರ ಸೈಕಲ ಕಳ್ಳತನ ಮಾಡಿ ಮಾರಾಟ ಮಾಡುತ್ತೀರುವ ಕಳ್ಳರಿಗೆ ಪತ್ತೆ ಹಚ್ಚಿದ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಮಾನ್ಯ ಪೊಲೀಸ್ ಆಯುಕ್ತರು ಕಲಬುರಗಿ ನಗರರವರು ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.